



ಶಾಲಾ ಕೈತೋಟ



ಉನ್ನತಿಯಲ್ಲಿ ಅಧ್ಯಕ್ಷರು ಸಹಿತ ಸದಸ್ಯರ ಇಡಿಯ ತಂಡ ಶಿಕ್ಷಕ ವೃಂದದ ಜೊತೆಗೆ ಸಮನ್ವಯದಿಂದ ಕೆಲಸ ಮಾಡುತ್ತಿರುವುದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ. ಅಧ್ಯಕ್ಷರು, ಮುಖ್ಯೋಪಾಧ್ಯಾಯಿನಿ ಹರ್ಷಿಣಿಯವರ ಪತಿಯಾಗಿದ್ದು ಪತಿ– ಪತ್ನಿ ಇಬ್ಬರೂ ಈ ಶಾಲೆಯ ಮೇಲೆ ವಿಶೇಷವಾದ ಆಸಕ್ತಿಯಿಂದ ಕೆಲಸ ಮಾಡುತಿದ್ದಾರೆ.

ಪ್ರಜಾಪ್ರಭುತ್ವ ಪರಿಕಲ್ಪನೆಯಡಿ ಶಿಕ್ಷಕರು, ಶಾಲಾಭಿವೃದ್ಧಿ ಸಮಿತಿ ಮತ್ತು ವಿದ್ಯಾರ್ಥಿಗಳು ಇಲ್ಲಿ ಕೂಡಿ ಕೆಲಸ ಮಾಡುತ್ತಾರೆ. ಎಸ್.ಡಿ.ಎಂ.ಸಿ. ಮತ್ತು ಶಿಕ್ಷಕ ವೃಂದ, ಶಾಲಾ ಆಡಳಿತ, ದಾನಿಗಳ ಸಂಪರ್ಕ ಅಭಿವೃದ್ಧಿ ಕಾರ್ಯಗಳ ಜೋಡಣೆ, ಸಮುದಾಯದ ಸಹಕಾರದ ಕಡೆ ಪ್ರಯತ್ನಶೀಲರಾಗಿದ್ದರೆ, ವಿದ್ಯಾರ್ಥಿ ಸಂಸತ್ತು ಶಾಲೆಯ ಕುಂದುಕೊರತೆ, ಅಗತ್ಯಗಳ ಬಗ್ಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳುತ್ತದೆ. ಒಪ್ಪು ತಪ್ಪುಗಳ ವಿಮರ್ಶೆ ನಡೆಯುತ್ತದೆ.

ವಿದ್ಯಾರ್ಥಿಗಳ ದತ್ತು: ಕಲಿಕೆಯಲ್ಲಿ ಹಿಂದುಳಿದ ಐದೈದು ವಿದ್ಯಾರ್ಥಿಗಳನ್ನು ಪ್ರತಿಯೊಬ್ಬ ಶಿಕ್ಷಕ ದತ್ತು ಪಡೆಯುತ್ತಾರೆ. ಅಂತಹ ಮಕ್ಕಳಿಗೆ ವಿಶೇಷ ತರಗತಿ, ತರಬೇತಿ ನೀಡಿ ಸಾಮರ್ಥ್ಯ ತುಂಬುವ ಜವಾಬ್ದಾರಿಯನ್ನು ಆಸಕ್ತಿಯಿಂದಲೇ ನಡೆಸುತ್ತಿದೆ.

'ಖಾಸಗಿ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ಸಂದರ್ಭದಲ್ಲಿ ಅವರ ಅಂಕಗಳನ್ನು ನೋಡುತ್ತವೆ. ಪ್ರತಿಭಾವಂತ ವಿದ್ಯಾರ್ಥಿಗಳನ್ನೇ ಆಯ್ದು ಸೇರ್ಪಡೆಗೊಳಿಸುತ್ತದೆ. ಸಹಜವಾಗಿಯೇ ಅವರ ವಿದ್ಯಾರ್ಥಿಗಳು ಶೇ. ನೂರರ ಫಲಿತಾಂಶ ತಂದು ಕೊಡುತ್ತಾರೆ. ಆದರೆ ಸರಕಾರಿ ಶಾಲೆಗಳಲ್ಲಿ ಹಾಗೆ ಮಾಡುವ ಹಾಗಿಲ್ಲ. ಹಳ್ಳಿಮೂಲೆಗಳಿಂದಲೂ ವಿದ್ಯಾರ್ಥಿಗಳು ಬರುತ್ತಾರೆ. ಕಡಿಮೆ ಅಂಕ ಪಡೆದವರೂ ಬರುತ್ತಾರೆ. ಅಂತಹ ಮಕ್ಕಳನ್ನು ಉತ್ತಮ ಅಂಕ ಗಳಿಸುವಂತೆ ಮಾಡುವುದೇ ನಮಗೆ ಆಸಕ್ತಿ. ಶಿಕ್ಷಕನ ಸಾಮರ್ಥ್ಯ ತಿಳಿಯುವುದೂ ಅದರಲ್ಲೇ. ಈ ವಿಚಾರವೇ ನಮಗೆ ದೊಡ್ಡ ಸವಾಲು' ಎಂದು ಮುಖ್ಯೋಪಾಧ್ಯಾಯಿನಿ ಹರ್ಷಿಣಿ ನಕ್ಕು ನುಡಿಯುತ್ತಾರೆ.

2001ರ ನಂತರ ಸುಮಾರು 50 ಲಕ್ಷ ರೂ.ಗೂ ಮಿಕ್ಕಿದ ಅಭಿವೃದ್ಧಿ ಕೆಲಸಗಳು ಎಸ್.ಡಿ.ಎಂ.ಸಿ ಮಾರ್ಗದರ್ಶನದಲ್ಲಿ ನಡೆದಿದೆ. ಜನಪ್ರತಿನಿಧಿಗಳ ಪ್ರದೇಶಾಭಿವೃದ್ಧಿ ನಿಧಿಯಿಂದ 30 ಲಕ್ಷ ರೂ. ಮೊತ್ತದ ನಿರ್ಮಾಣದ ಕಾಮಗಾರಿಗಳು ನಡೆದಿವೆ. 17 ಲಕ್ಷ ರೂ. ವೆಚ್ಚದಲ್ಲಿ ಸುಸಜ್ಜಿತ ಅಡುಗೆ ಮನೆ ನಿರ್ಮಾಣಗೊಂಡಿದೆ. ಸಂಸದ ಡಿ.ವಿ. ಸದಾನಂದ ಗೌಡ, ಮಾಜಿ ಶಾಸಕ ಗೋಪಾಲ ಭಂಡಾರಿ ಮತ್ತು ವಿಧಾನ ಪರಿಷತ್ ಸದಸ್ಯ ಶ್ರೀನಿವಾಸ ಅವರುಗಳ ಶಾಸಕರ ನಿಧಿಯಿಂದ ಈ ನಿರ್ಮಾಣಕ್ಕೆ ಧನ ಸಹಾಯ ದೊರಕಿದೆ. ಈ ಶಾಲೆಯ ಅಭಿವೃದ್ಧಿಗೆ ಬೇಕಾಗುವ ಹಣವನ್ನು ಎಸ್.ಡಿ.ಎಂ.ಸಿ. ದಾನಿಗಳ ಮತ್ತು ಜನಪ್ರತಿನಿಧಿಗಳ ಕೊಡುಗೆಗಳ ಮೂಲಕವೇ ಸಂಗ್ರಹಿಸಿದೆ.

ಬೋರೇಗೌಡರ ಕೊಡುಗೆ: ಶಾಲೆಯ ಸಾಧನೆಗೆ ನಿಕಟಪೂರ್ವ ಮುಖ್ಯೋಪಾಧ್ಯಾಯರಾಗಿದ್ದ ಬೋರೇಗೌಡ (1999–12) ಅವರೇ ನಮಗೆ ಪ್ರೇರಣೆ. ಶಾಲೆಯ ಪ್ರತಿ ವಿಚಾರದಲ್ಲೂ ನಮಗೊಂದು ಉತ್ತಮ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ. ಭವಿಷ್ಯದ ಪ್ರಗತಿಯ ಮುನ್ನೋಟ, ನೀಲಿ ನಕ್ಷೆ ಹಾಕಿ ಕೊಟ್ಟಿದ್ದಾರೆ. ಅವರು ಹಾಕಿ ಕೊಟ್ಟ ಹಾದಿಯಲ್ಲಿ ನಾವು ಪ್ರಯಾಣ ಮುಂದುವರೆಸಿದ್ದೇವೆ' ಎನ್ನುತ್ತಾರೆ ಮುಖ್ಯೋಪಾಧ್ಯಾಯಿನಿ ಹರ್ಷಿಣಿ.

ಮಕ್ಕಳ ಸರ್ವಾಂಗೀಣ ವಿಕಾಸಕ್ಕಾಗಿ ನೇತಾಜಿ ಸ್ಕೌಟ್ ದಳ, ಸೇವಾದಳ, ಇಕೊ ಕ್ಲಬ್, ಸಾಹಿತ್ಯ ಸಂಘ, ಸಾಂಸ್ಕೃತಿಕ ಸಂಘ, ಯೋಗ ಸಂಘ, ಇಂಟರಾಕ್ಟ್, ಶ್ರೀನಿವಾಸ ಗಣಿತ ಸಂಘ, ವಿಜ್ಞಾನ ಸಂಘ ರಚನೆಗೊಂಡಿವೆ. ವರ್ಷದಲ್ಲಿ ಹತ್ತು ಕಾರ್ಯಕ್ರಮ, ವಾರಕ್ಕೊಂದು ಸಂಘ ತರಗತಿ ಮಾಮೂಲು. ಹತ್ತರಲ್ಲಿ ಒಂದು ಸಂಘ ಪ್ರತಿಬಾರಿ ನೇತೃತ್ವ ವಹಿಸುತ್ತದೆ. ಅತಿಥಿಗಳಿಂದ ವಿಶೇಷ ಉಪನ್ಯಾಸ, ಮಾರ್ಗದರ್ಶನ ಕಾರ್ಯಗಳು, ಪ್ರತಿಭಾ ವಿಕಸನ ಕಾರ್ಯಕ್ರಮ ಆಯೋಜಿಸಲಾಗುತ್ತದೆ. ಪ್ರತಿದಿನ ಎರಡು ಗಂಟೆ ಆನ್‌ಲೈನ್ ಇಂಗ್ಲಿಷ್ ತರಬೇತಿಯೂ ಇದೆ.

ರಜಾದಿನಗಳಲ್ಲಿ ಯಕ್ಷಗಾನ ತರಬೇತಿ, ಚೆಂಡೆ, ನಾಟಕ, ಕರಾಟೆ, ಸ್ಪೋಕನ್ ಇಂಗ್ಲಿಷ್ ಕ್ಲಾಸ್ – ಹೀಗೆ ಹಲವು ತರಬೇತಿಗಳನ್ನು ವಿದ್ಯಾರ್ಥಿಗಳಿಗೆ ಇಲ್ಲಿ ನೀಡಲಾಗುತ್ತದೆ. ತರಗತಿಗೊಂದು ಲೈಬ್ರರಿ, 5500 ಪುಸ್ತಕಗಳ ಸಂಗ್ರಹ. ಗೋಮತಿ ಮಾಸಿಕ ಪತ್ರಿಕೆ, ಜ್ಞಾನ ದೀವಿಗೆ ವಾರ್ಷಿಕ ವಿಶೇಷಾಂಕ ಮಕ್ಕಳ ಬರಹದ ಆಸಕ್ತಿಗೆ ಇಂಬು ನೀಡಿದೆ.